## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 160/23

**ಸಾಕ್ಷಿಯನ್ನು ದಿಃ 24.06.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಗಣೇಶ್ ಹೆಚ್.ಕೆ. | ಸಿ.ಡಬ್ಲ್ಯೂಃ 1 | ಪಿ.ಡಬ್ಲ್ಯೂಃ1 |
| ತಂದೆಯ ಹೆಸರು | ಕುಳ್ಳೇಗೌಡ | | |
| ವಯಸ್ಸು | 52 ವರ್ಷ | | |
| ಕೆಲಸ | ಬಾರ್ ನಲ್ಲಿ ಕ್ಯಾಷಿಯರ್ | | |
| ವಾಸಸ್ಥಳ | ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಚಾಸಾ–2 ರಿಂದ 4 ರವರ ಪರಿಚಯ ಇದೆ. 1 ನೇ ಆರೋಪಿ ಪರಿಚಯ ಇದೆ. 2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತ್ತಿರುವ ದಾಖಲೆಗಳಲ್ಲಿ ನನ್ನ ಸಹಿ ಇದೆ. ದಾಖಲೆಗಳು ದೂರು ಆಗಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಹಾಗೂ ಮತ್ತೊಂದು ದಾಖಲೆ ಮಹಜರ್ ಆಗಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ನೀಡಿರುತ್ತೇನೆ.

2. ನಾನು ರೇಣುಕಾ ಬಾರ್ ನಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ದಿಃ 18.09.2022 ರಂದು ಬೆಳಿಗ್ಗೆ 8.00 ರ ಸಮಯ ರೇಣುಕಾ ಬಾರ್ ಗೆ ಹೋಗಿ ನೋಡಿದಾಗ ಬಾರ್ ಗೆ ಅಳವಡಿಸಿದ್ದ ರೋಲರ್ ಶಟರ್ ನ ಬೀಗವನ್ನು ಹೊಡೆಯಲಾಗಿತ್ತು. ಬಾರ್ಗೆ ಮತ್ತೊಂದು ಬಾಗಿಲು ಇದ್ದು ಅದನ್ನು ಹೊಡೆದು ಹಾಕಿದ್ದರು. ನಂತರ ನಾವು ಒಳಗೆ ಹೋಗಿ ನೋಡಿದಾಗ ವಸ್ತುಗಳೆಲ್ಲಾ ಹಾಗೇ ಇದ್ದವು. ಯಾವುದೇ ವಸ್ತುಗಳು ಕಳ್ಳತನವಾಗಿರಲಿಲ್ಲ. ನಂತರ ಈ ವಿಚರವನ್ನು ನಾನು ನಮ್ಮ ಮ್ಯಾನೇಜರ್ ಅವರಿಗೆ ಕರೆ ಮಾಡಿ ತಿಳಿಸಿದೆ. ನಂತರ ಅವರು ದೂರನ್ನು ನೀಡಲು ನನಗೆ ಸೂಚಿಸಿದ್ದರು. ನಂತರ ನಾನು ನಿಪಿ.1 ರಂತೆ ದೂರನ್ನು ನೀಡಿರುತ್ತೇನೆ.

3. ಅದೇ ದಿನ ಅಂದರೆ ದಿಃ 18.09.2022 ರಂದು ಪೊಲೀಸರು ಬೆಳಿಗ್ಗೆ 10.00 ರಿಂದ 11.00 ಗಂಟೆವರೆಗೆ ಸ್ಥಳ ಮಹಜರ್ ಮಾಡಲು ಬಂದಿದ್ದು ಸ್ಥಳವನ್ನು

ನಾನೇ ತೋರಿಸಿಕೊಟ್ಟಿರುತ್ತೇನೆ. ಆ ಸಮಯ ಚಾಸಾ-2,3 ರವರು ಹಾಜರಿದ್ದರು. ಸದರಿ ಮಹಜರ್ ಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ಮಹಜರ್ ಅನ್ನು ಪೊಲೀಸರು ನನಗೆ ಓದಿ ಹೇಳಿರುತ್ತಾರೆ.

4. ನಂತರ ದಿಃ 20.09.2022 ರಂದು ಪೊಲೀಸರು ಬಾರ್ ಕಳ್ಳತನ ಮಾಡಿದವರು ಸಿಕ್ಕಿದ್ದಾರೆ ಬನ್ನಿ ಎಂದು ನನ್ನನ್ನು ಪೊಲೀಸ್ ಠಾಣೆಗೆ ಬರಲು ಹೇಳಿದ್ದರು ನಾನು ಅಲ್ಲಿ ಹೋದಾಗ ನ್ಯಾಯಾಲಯದ ಮುಂದಿರುವ ಆರೋಪಿ ಮಾತ್ರ ಇದ್ದರು. ಬೇರೆ ಯಾರು ಇರಲಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಭಾಗಶಃಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

5. ನಿಪಿ.2 ಮಹಜರ್ ದಿಃ 19.09.2022 ರಂದು ಪೊಲೀಸರು ಮಾಡಿರುತ್ತಾರೆ ಎಂದರೆ ಸರಿ. ನಂತರ ದಿಃ 20.01.2023 ರಂದು ನಾನು ಠಾಣೆಗೆ ಹೋದಾಗ 1 ನೇ ಆರೋಪಿ ಜೊತೆ 2 ನೇ ಆರೋಪಿ ಮೊಹಮದ್ ಜುಬೇರ್ ಇದ್ದರು ಎಂದರೆ ಸರಿ. ಆದರೆ ನಾನು ಒಬ್ಬನನ್ನು ಮಾತ್ರ ನೋಡಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ.

## ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಎನ್ ಪಿ ಅವರಿಂದ-

6. ನಾನು 8 ನೇ ತರಗತಿ ಓದಿದ್ದೇನೆ. ನನಗೆ ಓದಲು-ಬರೆಯಲು ಸುಮಾರಾಗಿ ಬರುತ್ತದೆ. ಕನ್ನಡ ಭಾಷೆಯಲ್ಲಿ ಓದಲು-ಬರೆಯಲು ನನಗೆ ಬರುತ್ತದೆ. ನಿಪಿ.1 ರಲ್ಲಿ ಏನು ಬರೆದಿದೆ ನನಗೆ ಗೊತ್ತು. ಪೊಲೀಸಿನವರು ನಿಪಿ.1 ಅನ್ನು ಟೈಪ್ ಮಾಡಿ ಓದಿ ಹೇಳಿದ ನಂತರ ನಾನು ಸಹಿ ಮಾಡಿರುತ್ತೇನೆ. ಕೃತ್ಯ ನಡೆಯಿತು ಎಂದು ಹೇಳುವ ಹಿಂದಿನ ದಿನದಂದು ನಾವು ರಾತ್ರಿ 11.00 ಗಂಟೆಗೆ ಬಾರ್ ಅನ್ನು ಮುಚ್ಚಿದ್ದೇವು. ನಮ್ಮ ಬಾರಿನ ಬಾಗಿಲಿಗೆ ಹಾಕಿದ್ದ ಬೀಗ ಮುರಿದಿದ್ದರು ಎಂದು ಹೇಳಿದ್ದು ಸದರಿ ಮುರಿದ ಬೀಗ ಹಾಗೂ ಅದರ ಕೀಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಅದು ಯಾವ ಕಂಪನಿಯ ಬೀಗ ನನಗೆ ಹೇಳಲು ಆಗುವುದಿಲ್ಲ. ನಮ್ಮ ಬಾರಿಗೆ ಬೀಗವನ್ನು ದಿನನಿತ್ಯ

ನಾನೇ ಹಾಕುತ್ತಿದ್ದೆ. ನಮ್ಮ ಬಾರಿನ ಕ್ಯಾಷ್ ಡ್ರಾಯರ್ಗೆ, ಬಾಗಿಲಿಗೆ ಹಾಗೂ ರೋಲಿಂಗ್ ಶಟರ್ಗೆ ಹಾಕಿದ್ದ ಬೀಗಗಳನ್ನು ಹಾಗೂ ಅವುಗಳ ಕೀಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಸದರಿ ನಾನು ನೀಡಿದ ಬೀಗಗಳನ್ನು ಹಾಗೂ ಅವುಗಳ ಕೀಯನ್ನು ಪೊಲೀಸರು ಅಮಾನತ್ತುಪಡಿಸಿಕೊಂಡು ಸಂಬಂಧಪಟ್ಟ ಮಾಲುಪಟ್ಟಿಯಲ್ಲಿ ಅಳವಡಿಸಿ, ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ.

7. ಕಳ್ಳತನ ಯಾರು ಮಾಡಿದ್ದಾರೆ ಹಾಗೂ ಬೀಗಗಳನ್ನು ಯಾರು ಹೊಡೆದು ಹಾಕಿರುತ್ತಾರೆ ಎಂದು ನಾನು ಪ್ರತ್ಯಕ್ಷ ನೋಡಿಲ್ಲ ಎಂದರೆ ಸರಿ. ಈ ಪ್ರಕರಣ ಸಂಬಂಧ ನಾನು ಠಾಣೆಗೆ ಹೋದಾಗ ಪೊಲೀಸ ನನ್ನಿಂದ 2-3 ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಈಗ ನನಗೆ ತೋರಿಸಿದ ನಿಪಿ.1, 2 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯ ಹೆಸರು, ವಿಳಾಸ ಹಾಗೂ ತಂದೆ ಹೆಸರು ನನಗೆ ಹೇಳಲು ಆಗುವುದಿಲ್ಲ. ನಾನು ಆರೋಪಿಯನ್ನು ಇದೇ ಮೊದಲ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ಇಂದು ನಾನು ನನ್ನ ಮುಖ್ಯವಿಚಾರಣೆಯಲ್ಲಿ ನುಡಿದಿರುವ ವಿಚಾರಗಳನ್ನು ಇದೇ ಮೊದಲ ಬಾರಿ ನುಡಿಯುತ್ತಿದ್ದೇನೆ ಎಂದರೆ ಸರಿ.

8. ಚಾಸಾ-2, 3 ರವರು ನಮ್ಮ ಬಾರಿನ ಕೆಲಸಗಾರರು ಎಂದರೆ ಸರಿ. ಆ ದಿನ ಮಹಜರ್ ಗೆ ಬೇರೆ ಅಕ್ಕಪಕ್ಕದವರು ಬಂದು ಸಹಿ ಮಾಡಿರುವುದಿಲ್ಲ. ನಮ್ಮ ಅಂಗಡಿಯಲ್ಲಿ ಕಳ್ಳತನ ಮಾಡಿದವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ಹೇಳಿದ ನಂತರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.